೨. ಸದರಿ ಯೋಜನೆಗಳಿಗೆ ಅರಣ್ಯ ಇಲಾಖೆಗೆ ಗ್ರಾಮೀಣ ಅಭಿವೃದ್ಧಿ ಇಲಾಖೆಯಿಂದ ೧೯೯೯-೨೦ನೇ ಸಾಲಿಗೆ ರೂ. ೨೮೬.೫೬ ಲಕ್ಷಗಳನ್ನು ನಿಗಧಿಪಡಿಸಲಾಗಿತ್ತು. ಈ ಕೆಲಸ ಕಾರ್ಯಗಳನ್ನು ಜಿಲ್ಲಾಪರಿಷತ್ತುಗಳವತಿಯಿಂದ ನಡೆಸಲಾಗುತ್ತಿದೆ.

೩. (೧) ಪ್ರಸಕ್ತ ಸಾಲಿನಲ್ಲಿ ಈ ಯೋಜನೆಗೆ ಗ್ರಾಮೀಣಅಭಿವೃದ್ಧಿ ಇಲಾಖೆಯು ಮುಖಾಂತರ ಅರಣ್ಯ ಇಲಾಖೆಗೆ ರೂ. ೨೯೦.೦೦ ಲಕ್ಷಗಳನ್ನು ಒದಗಿಸಿದೆ.

೨) ಬ್ರಿಟಿಷ್ ಸರ್ಕಾರದ ಸಾಗರೊತ್ತರ ನೆರವಿನಿಂದ ಯೋಜನೆಯೊಂದನ್ನು ತಯಾರಿಸಿದ್ದು ಇದಕ್ಕೆ ಇನ್ನು ಮಂಜೂರಾತಿ ಕೇಂದ್ರ ಸರ್ಕಾರದವರಿಂದ ದೊರಕಬೇಕಿದ್ದು, ಪ್ರಸ್ತುತ ವರ್ಷಕ್ಕೆ ರಾಜ್ಯ ಆಯವ್ಯಯದಲ್ಲಿ ರೂ. ೧೦ ಲಕ್ಷಗಳನ್ನು ನಿಗದಿಗೊಳಿಸಲಾಗಿದೆ.

೪. ಕೇಂದ್ರ ಸರ್ಕಾರವು ಮಂಜೂರು ಮಾಡಿರುವ ರೂ ೨೯೦.೦೦ ಲಕ್ಷ ರೂಪಾಯಿಗಳನ್ನು ಅರಣ್ಯ ಇಲಾಖೆಯ ಕಾಮಗಾರಿಗಳಿಗೆ ಗ್ರಾಮೀಣ ಅಭಿವೃದ್ಧಿ ಇಲಾಖಾವತಿಯು ಮುಂಚೇನ ಈ ಸಾಲಿಗೆ ಮಂಜೂರು ಮಾಡಿರುತ್ತಾರೆ.

ನಾಗವಳ್ಳಿ ಮಂಡಲ ಪಂಚಾಯತ್ರಿಯವರು ಕೈಗೊಂಡಿರುವ ಅಭಿವೃದ್ಧಿ ಕಾರ್ಯಗಳು

೭೪೪ ಶ್ರೀ ಎಂ. ನಾರಾಯಣಸ್ವಾಮಿ (ಬೇತಮಂಗಲ).—ಮಾನ್ಯ ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಾರ್ತಾ ಮತ್ತು ಪ್ರಚಾರ ಮಂತ್ರಿಗಳು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

೧) ಸಂತೇಪರಹಳ್ಳಿಗೆ ಬರುವ ನಾಗವಳ್ಳಿ ಮಂಡಲ ಪಂಚಾಯತ್‌ಗೆ ಕಳೆದ ೩ ವರ್ಷಗಳಲ್ಲಿ ಅಭಿವೃದ್ಧಿ ಕಾರ್ಯಗಳ ಸಲುವಾಗಿ ಎಷ್ಟು ಹಣವನ್ನು ಬಿಡುಗಡೆ ಮಾಡಲಾಗಿದೆ.

೨) ಈ ಹಣವನ್ನು ಪೂರ್ಣವಾಗಿ ಖರ್ಚು ಮಾಡಲಾಗಿದೆಯೇ?

೩) ಹಾಗಿದ್ದಲ್ಲಿ ಯಾವ ಯಾವ ಯೋಜನೆಗೆ ಎಷ್ಟು ಹಣ ಖರ್ಚು ಮಾಡಲಾಗಿದೆ.

ಶ್ರೀ ಎಂ. ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತಿ ರಾಜ್, ವಾರ್ತಾ ಮತ್ತು ಪ್ರಚಾರ ಮಂತ್ರಿಗಳು)—

೧) ರೂ ೧೧,೫೬,೬೧೯-೦೦ ಗಳನ್ನು ಬಿಡುಗಡೆ ಮಾಡಲಾಗಿದೆ.
೨) ಇಲ್ಲ ರೂ ೭,೩೩,೧೫೯-೦೦ ಮಾತ್ರ ಖರ್ಚು ಮಾಡಲಾಗಿದೆ.
೩) ಯೋಜನೆವಾರು ಖರ್ಚು ಮಾಡಿದ ವಿವರಗಳನ್ನು ಈ ಕೆಳಗಿನಂತಿವೆ.

	ಯೋಜನೆ ವಿವರ	ಖರ್ಚು ಮಾಡಿದ ಹಣ
೧	ಎನ್‌ಆರ್‌ಇಪಿ ಗುಂಪು ಮನೆ	೭೬೫೦೯.೦೦
೨	ಮಿಲಿಯನ್ಸ್ ವೆಲ್	೪೪೯೯.೦೦
೩	ಜೆ. ಆರ್. ವೈ ಗುಂಪು ಮನೆ	೨೨೦೦೦.೦೦
೪	ಜೆ. ಆರ್.ವೈ ದಶಲಕ್ಷ ಭಾವಿ	೧೭೦೦೦.೦೦
೫	ವಿಶೇಷ ಘಟಕ ಗುಂಪು ಮನೆ	೮೯೯೨.೦೦
೬	ಜನತಾ ವಸತಿ ಯೋಜನೆ	೯೦೫೬೪.೦೦
೭	ಜೀತ ವಿಮುಕ್ತರ ಪುನರ್ ವಸತಿ	೨೯೩೭೫೦.೦೦
೮	ಸಮಗ್ರ ಗ್ರಾಮೀಣ ಅಭಿವೃದ್ಧಿ ಯೋಜನೆ	೬೮೩೩೫೦.೦೦
	ಒಟ್ಟು	೭೩೩೧೯.೦೦